# 33. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾವಲಿ, ಸೊರಬ





ಮಲೆನಾಡು ಹಾಗೂ ಬಯಲು ಸೀಮೆಯ ಮಧ್ಯಭಾಗದ ದಟ್ಟ ಕಾಡಿನ ಇತಿಹಾಸ ಹೊಂದಿರುವ ಪ್ರದೇಶದಲ್ಲಿನ ಮಾವಲಿ ಗ್ರಾಮವು 100 ಕುಟುಂಬಗಳನ್ನು ಹೊಂದಿದ್ದು 412 ಜನಸಂಖ್ಯೆಯನ್ನು ಹೊಂದಿದ್ದು ದೊಡ್ಡ ದೊಡ್ಡ ಹುಲಿಗಳನ್ನು ಹೊಂದಿದ್ದರಿಂದ ಮಹಾಹುಲಿಗಳ ನಾಡು, ಮಲ್ಲರನಾಡು ಎಂಬ ಐತಿಹ್ಯದಿಂದ ಈಗ ಮಾವಲಿ ಎಂಬ ಹೆಸರು ಪಡೆದಿದೆ. ಈ ಗ್ರಾಮದಲ್ಲಿ ಶಿಕ್ಷಕರು, ವ್ಯವಸಾಯಗಾರರು, ವ್ಯಾಪಾರಸ್ಥರು, ಕ್ಷೌರಿಕರು ಮುಂತಾದವರು ಇದ್ದಾರೆ. ತಾವರೆ ಕೊಪ್ಪದ ಗವಿಸಿದ್ದೇಶ್ವರ ಐತಿಹಾಸಿಕ ಗುಹೆ ಹಾಗೂ ಉರುಗನ ಹಳ್ಳಿಯ ಕಾಳಿಂಗೇಶ್ವರ ದೈವಸನ್ನಿಧಿ ಮತ್ತು ದರ್ಗಾದ ಸರ್ವ ಸಮನ್ವಯತೆಯ ಗ್ರಾಮಗಳನ್ನು ಒಳಗೊಂಡ ಪ್ರದೇಶ ಇದಾಗಿದೆ.

ನಮ್ಮ ಶಾಲೆಯು 1935 ರಲ್ಲಿ ಪ್ರಾರಂಭವಾಗಿದ್ದು ಪ್ರಸಕ್ತ ವರ್ಷದಲ್ಲಿ 5 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸಿದ್ದೇವೆ. ಕ್ಲಸ್ಟರ್ ಕೇಂದ್ರವಾಗಿರುವ ನಮ್ಮ ಶಾಲೆಯಲ್ಲಿ ಮಾವಲಿ ಗ್ರಾಮ, ಚನ್ನಾಪುರ, ಶಿವಪುರ, ಶಾಂತವೇರಿ, ಅಂಡಿಗೆ, ಹರೂರು, ತಾವರೆಕೊಪ್ಪ, ಗುಡ್ಡದಹೊಸಹಳ್ಳಿ ಗ್ರಾಮಗಳ ವಿದ್ಯಾರ್ಥಿಗಳು ಓದುತ್ತಿದ್ದಾರೆ. 1 ರಿಂದ 7 ನೇ ತರಗತಿವರೆಗೆ 118 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಹಾಸ್ಟೆಲ್ ವ್ಯವಸ್ಥೆ ಇವರುವುದರಿಂದ ದೂರದ ಊರಿನ ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

ನಮ್ಮ ಕ್ರಿಯಾ ಶೀಲ ಶಿಕ್ಷಕ ವೃಂದವು ನಾವೀನ್ಯಯುತ ಚಟುವಟಿಕೆಗಳನ್ನು ಬಳಸಿ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸುತ್ತಿದ್ದಾರೆ. ನಲಿ ಕಲಿಯಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡಿ ಸರ್ವತೋಮುಖ ಪ್ರಗತಿಗೆ ಪ್ರಯತ್ನಿಸುತ್ತಿದ್ದೇವೆ. ಹಾಗೆಯೇ ಸಹಪಠ್ಯ ಚಟುವಟಿಕೆಗಳಾದ ರಾಷ್ಟ್ರೀಯ ಹಬ್ಬಗಳು, ಪ್ರತಿಭಾ ಕಾರಂಜಿ ಹಾಗೂ ಕ್ರೀಡೆಗಳಲ್ಲಿ ಉತ್ತಮ ಸಾಧನೆ ಮಾಡಲು ಸೂಕ್ತ ಪ್ರೋತ್ಸಾಹ ನೀಡುತ್ತಿದ್ದೇವೆ. ಕ್ರೀಡೆಯಲ್ಲಿ ನಮ್ಮ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿಯೂ ಸ್ಪರ್ಧಿಸುತ್ತಿದ್ದಾರೆ.

ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ಬಸವರಾಜ ಅಕ್ಕಿ ಹಾಗೂ ಸದಸ್ಯರು, ಗ್ರಾಮಸ್ಥರ ಪ್ರೋತ್ಸಾಹದಿಂದ ಶಾಲೆಯನ್ನು ಅಭಿವೃದ್ಧಿಯ ಕಡೆಗೆ ಕರೆದೊಯ್ಯಲು ಸಾಧ್ಯವಾಗುತ್ತಿದೆ. ಇವರ ಸಹಾಯದಿಂದ ಶಾಲೆಗೆ ಸ್ಮಾರ್ಟ್ ಕ್ಲಾಸ್ ಒದಗಿಸಲು ದಾನಿಗಳು ಮುಂದೆ ಬಂದಿದ್ದಾರೆ. ಮುಂದಿನ ದಿನಗಳಲ್ಲಿ ಅದನ್ನು ಅನುಷ್ಠಾನಗೊಳಿಸಬೇಕಾಗಿದೆ. ಹಾಗೆಯೇ ಕ್ಲಸ್ಟರ್ ಕೇಂದ್ರವಾಗಿರುವ ಶಾಲೆಗೆ ಒಂದು ರಂಗಮಂದಿರ ಕೂಡಾ ಮಂಜೂರಾಗಿದೆ. ಮುಖ್ಯ ಶಿಕ್ಷಕರ ಕೊಠಡಿ ನಿರ್ಮಾಣ ಹಂತದಲ್ಲಿದೆ.












Shot on vivo Y69
16MP Front Camera


ರಾಜ್ಯ ಮಟ್ಟದಲ್ಲಿ ಬೆಂಗಳೂರು
ವಿಭಾಗವನ್ನು ಪ್ರತಿನಿಧಿಸಿದ
ಬಾಲಕಿಯರ ಕಬಡ್ಡಿ ತಂಡ.


kolata winners in taluk.
level.HPS Mavali.



ಸಾರ್ವಜನಿಕ ಶಿಕ್ಷಣ ಇಲಾಖೆ

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಾವಲಿ.

## ಗ್ರಾಮ ಪಂಚಾಯಿತಿ ಮಾವಲಿ ಸೊರಬ (ತಾ) ಶಿವಮೊಗ್ಗ (ಜಿ)

**14 ವರ್ಷದ ವಯೋಮಿತಿ ಒಳಗಿನ ಬಾಲಕರ ಮತ್ತು ಬಾಲಕಿಯರ 2019-20 ನೇ ಸಾಲಿನ ವಿಭಾಗ ಮತ್ತು ರಾಜ್ಯ ಮಟ್ಟದ ಕ್ರೀಡಾ ಸಾಧನೆ**



ವಲಯ ಮಟ್ಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದು ಸಂಭ್ರಮಿಸಿದ ಕ್ಷಣ



ತಾಲ್ಲೂಕು ಮಟ್ಟದಲ್ಲಿ ಪ್ರಶಸ್ತಿ ಗೆದ್ದು ಸಂಭ್ರಮಿಸಿದ ಕ್ಷಣ



ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ ಗೆದ್ದು ಸಂಭ್ರಮಿಸಿದ ಕ್ಷಣ



ವಿಭಾಗ ಮಟ್ಟದಲ್ಲಿ ಪ್ರಶಸ್ತಿ ಗೆದ್ದು ರಾಜ್ಯ ಮಟ್ಟಕ್ಕೆ ಆಯ್ಕೆ ಆದ ಕ್ಷಣ

ಅಭಿನಂದನೆಗಳೊಂದಿಗೆ:- ಶಾಲಾ ಎಸ್.ಡಿ.ಎಮ್.ಸಿ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು

ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕ ವೃಂದದವರು ಹಾಗೂ ಊರ ಗ್ರಾಮಸ್ಥರು ಮತ್ತು ಪೋಷಕರು






ಈ ವರ್ಷ ಶಾಲೆಯ ಬಾಲಕಿಯರ ಕಬಡ್ಡಿ ತಂಡವು ರಾಜ್ಯಮಟ್ಟದಲ್ಲಿ ಸ್ಪರ್ಧಿಸಿದ್ದು ನಮಗೆ ಹೆಮ್ಮೆಯ ವಿಷಯವಾಗಿದೆ. ಈ ಯಶಸ್ಸಿಗೆ ಹಿಂದಿನ ವರ್ಷದಿಂದ ಪ್ರಯತ್ನಿಸಿ ವಿಭಾಗ ಮಟ್ಟಕ್ಕೆ ತೃಪ್ತಿಪಟ್ಟುಕೊಂಡ ನಮಗೆ, ಈ ವರ್ಷದ ಯಶಸ್ಸು ಹೊಸ ಅನುಭವ ಕೊಟ್ಟಿದೆ. ರಾಜ್ಯ ಮಟ್ಟದ ಕ್ರೀಡಾ ನಿಯಮಗಳು, ವಾತಾವರಣ, ನಾಲ್ಕು ವಿಭಾಗದ ತಂಡಗಳ ಸ್ಪರ್ಧಾ ಅನುಭವ, ದೂರ ದರ್ಶನದ ಪ್ರೋ ಕಬಡ್ಡಿಯನ್ನು ನೆನಪು ಮಾಡಿ ಕೊಟ್ಟಿದ್ದು ನಮ್ಮ ವೃತ್ತಿ ಜೀವನದ ಅತ್ಯುತ್ತಮ ಕ್ಷಣಗಳಾಗಿವೆ. ಈ ಯಶಸ್ಸಿನ ಹಾದಿಯಲ್ಲಿ ಕ್ರೀಡಾಪಟುಗಳಿಗೆ ಕ್ರೀಡಾ ಬಟ್ಟೆಗಳನ್ನು ಕೊಡಿಸಿ ಪ್ರೋತ್ಸಾಹ ನೀಡಿದವರು ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಬಸವರಾಜ ಎಂ ಎಂ ಮಾಸೂರ ಹಾಗೂ ಶಿಕ್ಷಕ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ಮಾವಲಿ ಕ್ಲಸ್ಟರಿನ ಶಿಕ್ಷಕ ಬಳಗ, ಎಸ್‌ಡಿಎಂಸಿ ಅಧ್ಯಕ್ಷರು, ದಾನಿಗಳು ತನು–ಮನ–ಧನದಿಂದ ಸಹಾಯಮಾಡಿದರು.